ಎಂಬಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲದೇ ಇರುವುದರಿಂದ ಹೊಸ ಕಾರ್ಯಕ್ರಮಗಳು ಅದರಲ್ಲಿ ಇಲ್ಲದೆ ಇದ್ದುದರಿಂದ ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ಯಾವ ರೀತಿ ವ್ಯಾಪಕವಾದಂತಹ ಭ್ರಷ್ಟಾಚಾರ ನಡೆದು ಸರಕಾರಕ್ಕೆ ಬರಬೇಕಾದಂತಹ ಸಂಪನ್ಮೂಲಗಳ ಲೂಟಿಯಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಸರಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲದೆ ಇದ್ದು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂತಹ ಈ ಸಂದರ್ಭದಲ್ಲಿ ಯಾವರೀತಿ ದುಡ್ಡು ಪೋಲಾಗುತ್ತಿದೆ ಇದನ್ನು ಬಿಗಿ ಮಾಡಬೇಕಾ. ಒಬ್ಬಬ್ಬರ ಸ್ಕ್ರೂವನ್ನು ಟೈಟ್ ಮಾಡಿದರೆ ಎಲ್ಲಾ ಸರಿ ಹೋಗುತ್ತಾರೆ. ಅಧಿಕಾರಿಗಳಲ್ಲಿ ಪ್ರಾಮಾಣಿಕರೂ ಇದ್ದಾರೆ, ಎಲ್ಲರೂ ಭ್ರಷ್ಟರೆಂದು ನಾನು ಹೇಳುವುದಿಲ್ಲ. ಯಾವ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಅಲ್ಲಿರುವಂತಹ ಅಧಿಕಾರಿಗಳೇ ಸರ್ಕಾರವನ್ನು ನಡೆಸುವಂತಹವರು. ನಿಮ್ಮ ಸರ್ಕಾರಕ್ಕೆ ನೈತಿಕ ಸ್ಥೈರ್ಯ ಬರಬೇಕೆಂದು ಇದ್ದರೆ, ಕೆಟ್ಟ ಪರಿಣಾಮ ಆಗಬಾರದೆಂದು ಇದ್ದರೆ ಸೂಕ್ತ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ ಈ ರೀತಿಯ ಭ್ರಷ್ಟಾಚಾರ ಮಾಡಿದಂತಹವರು ಕೆಲವರ ರಕ್ಷಣೆಯಲ್ಲಿ ಬಮಾಕುವಂತಹ ಪ್ರಯತ್ನವನ್ನು ಕೊನೆಗಾಣಿಸಬೇಕು ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕಲ್ಲು ಒಡ್ಡು ಯೋಜನೆ ಬಂದರೆ ೧೭೨ ಎಕರೆ ಕಾಡು ಹೋಗುತ್ತದೆಂದು ಹೇಳಿ ಅಲ್ಲಿ ನೀರಾವರಿ ಯೋಜನೆ ಪ್ರಾರಂಭವಾಗುವುದನ್ನು ತಡೆಯುವಂತಹ ಅರಣ್ಯಾಧಿಕಾರಿ ಇದ್ದಾರೆ. ಈ ರೀತಿ ಸಾವಿರಾರು ಎಕರೆ ಭೂಮಿಯನ್ನು ಲೀಸ್ ಕೊಟ್ಟು ಹಣವನ್ನು ಲೂಟಿ ಮಾಡಿ ಅರಣ್ಯವನ್ನು ಸರ್ವನಾಶ ಮಾಡುವಂತಹ ಒಂದು ಪ್ರಯತ್ನವನ್ನು ವ್ಯವಸ್ಥಿತವಾಗಿ ಅಧಿಕಾರಿಗಳು ಮಾಡುತ್ತಿದ್ದಾರೆ ಇದನ್ನು ಕೊನೆ ಮಾಡುವಂತಹ ಪ್ರಯತ್ನ ಮಾಡಬೇಕೆಂದು ತಮ್ಮ ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತಾ ಈ ರಾಜ್ಯಪಾಲರ ಭಾಷಣದಲ್ಲಿ ಏನೂ ಈ ರಾಜ್ಯದ ಜನಪರ ಕಾರ್ಯಕ್ರಮಗಳಲ್ಲಿ ಹೊಸ ಯೋಜನೆಗಳು ಏನೂ ಇಲ್ಲ. ರೈತನನ್ನು ಬಡವನನ್ನು ಹರಿಜನ ಗಿರಿಜನ ಬಂಧುಗಳನ್ನು ಮತ್ತು ನಿರುದ್ಯೋಗಿ ಯುವಕರನ್ನು ಮೇಲೆಬ್ಬಿಸುವಂತಹ ಯಾವುದೇ ಕಾರ್ಯಕ್ರಮ ಇಲ್ಲದೇ ಇರುವಂತಹ ಈ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡುತ್ತಾ, ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

ಪ್ರಕಟಣೆ

ಛೇರ್ಮನ್.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಪ್ರಕಟಣೆ ಬಂದಿದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ನಿಯಮ ೧೮೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಾ. ೨೯-೩-೯೦ ರಂದು ಅನುಮೋದಿಸಲಾಯಿತು ಎಂಬುದನ್ನು ತಿಳಿಸುತ್ತಿದ್ದೇನೆ.

"ಕರ್ನಾಟಕ ಧನ ವಿನಿಯೋಗ ವಿಧೇಯಕ-೧೯೯೦"

ಶ್ರೀ ಪುಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಸಭಾಧ್ಯಕ್ಷಣಿಯವರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ನಾನು ಆಗಲೇ ಇಂಟರಪ್ಟ್ ಮಾಡಬೇಕಿದ್ದೆ. ಏಕೆಂದರೆ, ಮಧ್ಯಾಹ್ನ ಇಲ್ಲಿ ಗಲಾಟೆ ನಡೆದಿದೆ.

ಛೇರ್ಮನ್.—ಈಗ ಬಂದರು ಮತ್ತು ಮಿಾನುಗಾರಿಕೆ ಹಾಗೂ ನಗರಾಭಿವೃದ್ಧಿ ಖಾತೆಯ ಸನ್ಮಾನ್ಯ ಸಚಿವರು ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ತಾ. ೧೨-೩-೯೦ರಂದು ಸಂಭವಿಸಿದ ದೋಣಿ ದುರಂತಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಸದನಕ್ಕೆ ನೀಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ನಡೆದ ದೋಣಿ ದುರಂತದ ಬಗ್ಗೆ

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮಾನ್ಯ ಬಂದರು ಮತ್ತು ಮಿಾನುಗಾರಿಕೆ ಹಾಗೂ ನಗರಾಭಿವೃದ್ಧಿ ಖಾತೆಯ ಸಚಿವರು).—ಸನ್ಮಾನ್ಯ ಅಧ್ಯಕ್ಷಣಿಯವರೆ, ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ತಾ. ೧೨-೩-೯೦ರಂದು ಸಂಭವಿಸಿದ ದೋಣಿ ದುರಂತದ ಬಗ್ಗೆ ಈ

ಸದನದಲ್ಲಿ ಪ್ರಸ್ತಾಪಕ್ಕೆ ಬಂದಾಗ ಆ ಸ್ಥಳಕ್ಕೆ ನಾನು ಭೇಟಿ ನೀಡಿ ಬಂದನಂತರ ನಾನು ಒಂದು ಸವಂಗ್ರ ಹೇಳಿಕೆಯನ್ನು ನೀಡುತ್ತೇನೆ ಎಂದು ನಾನು ಈ ಸದನಕ್ಕೆ ಒಂದು ಆಶ್ವಾಸನೆಯನ್ನು ನೀಡಿದ್ದೆ. ಅದರ ಪ್ರಕಾರ ಇವತ್ತು ನಾನು ಈ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಬಿಜಾಪುರ ಜಿಲ್ಲೆಯಂ ಬಿಳಗಿ ತಾಲ್ಲೂಕಿನ ಧವಳೇಶ್ವರ ಗ್ರಾಮದಲ್ಲಿ ದಿನಾಂಕ. ೧೨-೩-೯೦ರಂದು ನಡೆದ ದುರದೃಷ್ಟಕರ ದೋಣಿ. ದುರಂತಕ್ಕೆ ಸಂಬಂಧಪಟ್ಟಂತೆ ದಿನಾಂಕ. ೧೯-೩-೯೦ರಂದು ಸದನದ ವೇದಿಕೆಯಲ್ಲಿ ಮಾಡಲಾದ ಆಶ್ವಾಸನೆಯ ಸಂಬಂಧದಲ್ಲಿ, ನಾನು, ದಿನಾಂಕ. ೨೪-೩-೯೦ರಂದು, ಸ್ಥಳೀಯ ಶಾಸಕರು, ಬಿಜಾಪುರದ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, ಬೆಳಗಾಂನ ವಿಭಾಗಾಧಿಕಾರಿಯವರು ಮತ್ತು ಡೆಪ್ಯುಟಿ ಕಮೀಷನರು, ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್, ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶಕರೊಂದಿಗೆ ಸದರಿ ಗ್ರಾಮಕ್ಕೆ ಭೇಟಿ ನೀಡಿದೆ. ದುರಂತದ ವಿವರಗಳು ಈ ಮುಂದಿನಂತಿವೆ.

ದಿನಾಂಕ. ೧೨-೩-೯೯೦ ರಂದು, ಧವಳೇಶ್ವರ ಗ್ರಾಮದ ಕೆಲವು ನಿವಾಸಿಗಳು ಮೃತ ವ್ಯಕ್ತಿಯೊಬ್ಬನ ಅಂತ್ಯ ಸಂಸ್ಕಾರಕ್ಕಾಗಿ ನದಿಯನ್ನು ದಾಟಿ ದಂಗರ್ಗಿ ಗ್ರಾಮ ತಲುಪಬೇಕಿತ್ತು. ಮೃತ ವ್ಯಕ್ತಿಯ ಅಂತ್ಯ ಸಂಸ್ಕಾರದ ಸಮಯದಲ್ಲಿ ಹಾಜರಿರಬೇಕೆಂಬ ಆತಂಕದಿಂದ ನದಿಯ ಆಚೆದಡಕ್ಕೆ ತಮ್ಮನ್ನು ಕೊಂಡೊಯ್ಯುವಂತೆ ದೋಣಿ ನಡೆಸುವ (ಅಂಬಿಗ) ಶ್ರೀ ರುದ್ರಪ್ಪ ಪರಸಪ್ಪ ಅಂಬಿಗೇರಿಯನ್ನು ಒತ್ತಾಯಿಸಿದರು. ಜನರ ಒತ್ತಾಸೆಗೆ ಮಣಿದ ಅವರು, ರಾತ್ರಿ ೮.೩೦ರ ಸಮಾರಿಗೆ ತಾನೂ ಸೇರಿ ೩೩ ಮಂದಿಯೊಂದಿಗೆ ಅವರನ್ನು ಕರೆದೊಯ್ಯಲು ಹೊರಟನು. ದುರದೃಷ್ಟವಶಾತ್ ದೋಣಿಯು, ದಡ ತಲುಪುವ ಮುನ್ನವೇ, ನೀರಿನಲ್ಲಿ ಮುಳುಗಿತು. ೩೩ ಮಂದಿ ಪೈಕಿ, ೧೬ ಮಂದಿ ಮೃತರಾದರು. ದುರಂತ ಸಂಭವಿಸಿದ ದಿನವೇ ೧೪ ಶವಗಳು ದೊರೆತವು. ಮರುದಿನ ೨ ಶವಗಳು ದೊರೆತವು.

ದುರಂತಕ್ಕೀಡಾದ ದೋಣಿಯು ಧವಳೇಶ್ವರ ಗ್ರಾಮದ ಶ್ರೀ ರುದ್ರಪ್ಪ ಪರಸಪ್ಪ ಅಂಬಿಗೇರಿಯವರ ಒಡೆತನದಲ್ಲಿದ್ದ ೩೩ ಹಳೆಯ ಕಾಲದ ದೋಣಿಯಾಗಿತ್ತು ಮತ್ತು ಅದು ಅನಧಿಕೃತವಾಗಿ ಓಡಿಸಲ್ಪಡುತ್ತಿದ್ದ ದೋಣಿಯಾಗಿತ್ತು. ನಾನು, ಸದರಿ ಗ್ರಾಮದ ಜನರನ್ನು ಭೇಟಿ ಮಾಡಿ ದುರಂತದ ಬಗ್ಗೆ ವಿಚಾರಿಸಿದೆನು. ಈ ದುರಂತಕ್ಕೆ ಸಂಬಂಧಪಟ್ಟಂತೆ ಈ ಹಿಂದಯೂ ಅಂಬಿಗನು ೫೦-೬೦ ಜನರನ್ನು ಒಂದೇ ಬಾರಿಗೆ ಕೊಂಡೊಯ್ಯುತ್ತಿದ್ದನೆಂದು ಆದರೆ ಆ ನಿರ್ದಿಷ್ಟ ದಿನದಂದು ಜನ ಕಡಿಮೆಯಿದ್ದರೂ ದಡದ ಸಮೀಪದಲ್ಲಿ ದೋಣಿ ಮಗುಚಿತೆಂದೂ ಅವರ ಹೇಳಿಕೆಯಿಂದ ತಿಳಿದು ಬಂದಿದೆ. ದೋಣಿಯಂ ಕೆಳಗೆ ಹಠಾತ್ತಾಗಿ ಆದ ಬರುಕಿನಿಂದಾಗಿ ಹಾಗೂ ನೀರು ದೋಣಿಗೆ ನುಗ್ಗಿದ್ದರಿಂದ ಈ ದೋಣಿ ದುರಂತ ಸಂಭವಿಸಿರಬಹುದೆಂದು ಅಧಿಕೃತ ಮೂಲಗಳಿಂದ ಹಾಗೂ ಸ್ಥಳೀಯರಿಂದ ತಿಳಿದುಬಂದಿದೆ.

ಆ ತರುವಾಯ, ನಾನು ಮೃತರ ಕುಟುಂಬದವರನ್ನು ಭೇಟಿ ಮಾಡಿ ನನ್ನ ಸಂತಾಪ ಸೂಚಿಸಿದೆ. ಅಂಬಿಗನ ಕುಟುಂಬವು, ದುಡಿಯುವವರಿಲ್ಲದೆ ಸಂಕಷ್ಟಕ್ಕೆ ಈಡಾಗಿದೆ ಎಂಬ ಅಂಶವು ಗ್ರಾಮಸ್ಥರಿಂದ ನನ್ನ ಗಮನಕ್ಕೆ ಬಂತು. ಅವರ ಸ್ಥಿತಿಯನ್ನು ಪರಿಗಣಿಸಿ, ಇಲಾಖೆಯಲ್ಲಿ ಅಂಬಿಗನ ಮಗನಿಗೆ ಕೆಲಸ ನೀಡುವಂತೆ ಬಂದರು ವಂತ್ತು ಒಳನಾಡು ಜಲಸಾರಿಗೆ ಇಲಾಖೆಯ ನಿರ್ದೇಶಕರಿಗೆ ಸೂಚಿಸಿದೆ. ಹಾಗಾಗಿ, ದಿನಾಂಕ. ೨೬-೩-೯೯೦ರಿಂದ ಪರಿಣಾಮಕಾರಿಯಾಗುವಂತೆ ಅವನ ಮಗನಾದ ಶ್ರೀ ಕಲ್ಲಪ್ಪ ರುದ್ರಪ್ಪ ಅಂಬಿಗೇರನಿಗೆ ನೇಮಕಾತಿ ನೀಡಲಾಯಿತು. ನಾನು ಮೃತರ ಕುಟುಂಬದವರನ್ನು ಭೇಟಿ ಮಾಡಿದಾಗ, ಮೃತರಿಗೆ ಸಂಬಂಧಪಟ್ಟ ಕೆಲವರು ಹೆಣ್ಣುಮಕ್ಕಳು ತಮ್ಮ ಕುಟುಂಬದಲ್ಲಿ ದುಡಿಯುವವರಿಲ್ಲದ ತೊಂದರೆಗೆ ಒಳಗಾಗಿದ್ದೇವೆಯೆಂದು ತಿಳಿಸಿದರು. ಸರ್ಕಾರಿ ಹಾಸ್ಟಲ್‌ಗಳು/ಸಂಸ್ಥೆಗಳಲ್ಲಿ ಅವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಪರಿಗಣಿಸುವಂತೆ ಜಿಲ್ಲೆಯ ಅಧಿಕಾರಿಗಳಿಗೆ ಸೂಚಿಸಿದೆ.

ಮೃತರ ಕುಟುಂಬಗಳಿಗೆ ಪರಿಹಾರ ನೀಡುವುದಕ್ಕೆ ಸಂಬಂಧಪಟ್ಟಂತೆ, ಯುನೈಟೆಡ್ ಇಂಡಿಯಾ ಇನ್ಷೂರೆನ್ಸ್ ಕಂಪನಿಯು ಮೃತ ವ್ಯಕ್ತಿಯೊಬ್ಬನಿಗೆ ೩೦೦೦ ರೂಪಾಯಿಯಂತೆ ಮತ್ತು ರಾಜ್ಯ ಸರ್ಕಾರವು ತಲಾ ೨೦೦೦ ರೂಪಾಯಿಯಂತೆ ಬಿಡುಗಡೆ ಮಾಡಿದೆ. ಅಲ್ಲದೆ ತಕ್ಷಣ ತಲಾ ೨೦೦೦ ರೂಪಾಯಿ ಬಿಡುಗಡೆ ಮಾಡುವಂತೆ ಜಿಲ್ಲಾ ಪರಿಷತ್ತು ಆಶ್ವಾಸನೆ ನೀಡಿದೆ. ಇದೂ ಅಲ್ಲದೆ, ಸನ್ಮಾನ್ಯ ಮುಖ್ಯಮಂತ್ರಿಯವರು, ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾನವೀಯ ದೃಷ್ಟಿಯಿಂದ, ಪ್ರತಿ ಮೃತ ವ್ಯಕ್ತಿಯ ಸಮೀಪದ ಬಂಧುಗಳಿಗೆ ಮುಖ್ಯ ಮಂತ್ರಿ ನಿಧಿಯಿಂದ ೩೦೦೦ ರೂಪಾಯಿ ನೀಡುವ ಕೃಪೆ ತೋರಿದ್ದಾರೆ.

ನಾನು ಭೇಟಿ ನೀಡಿದಂದೇ ಸುರಕ್ಷತಾ ಸಾಧನಗಳ ಸೌಲಭ್ಯವನ್ನು ಒದಗಿಸುವುದಕ್ಕಾಗಿ, ಒಳನಾಡು ಜಲಸಾರಿಗೆ ಇಲಾಖೆಯು ಒಂದು ಯಂತ್ರ ಚಾಲಿತ ದೋಣಿಯನ್ನು ನಡೆಸಲು ಪ್ರಾರಂಭಿಸಿದೆ.

ಪುತ್ತಮುತ್ತಲ ಗ್ರಾಮಸ್ಥರ ಬೇಡಿಕೆಯ ಮೇರೆಗೆ, ಇನ್ನು ಮೂರು ಹೆಚ್ಚು ದೋಣಿಗಳನ್ನು ಒದಗಿಸುವಂತೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ನಿರ್ದೇಶಕರಿಗೆ ನಿರ್ದೇಶಿಸಿದ್ದೇನೆ.

ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶಕರಿಗೆ, ರಾಜ್ಯದಲ್ಲಿ ಅನಧಿಕೃತವಾಗಿ ಸಾಗುವ ದೋಣಿಗಳನ್ನು ಪತ್ತೆ ಹಚ್ಚುವಂತೆಯೂ, ಸಾರ್ವಜನಿಕರ ಹಿತದೃಷ್ಟಿಯಿಂದ ಲೈಸೆನ್ಸು ಪಡೆದ ದೋಣಿಗಳನ್ನು ಮಾತ್ರ ನಡೆಸುವಂತೆ ಮಿತಿಪಡಿಸಿಕೊಳ್ಳುವಂತೆಯೂ ಸೂಚನೆ ನೀಡಲಾಗಿದೆ.

ಛೇರ್‌ಮನ್. —ಮಾನ್ಯ ರಾಯುರೆಡ್ಡಿಯವರೇ, ತಾವು ಏನೋ ಕೇಳಬೇಕೆಂದು ಹೇಳಿದರಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ, ಅನಧಿಕೃತವಾಗಿ ಆ ಅಪಘಾತ ದೋಣಿಯನ್ನು ನಡೆಸಿದನಲ್ಲ ಅವನ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಲಿಕ್ಕಿಲ್ಲವಾ ? ಯಾರೋ ೧೨-೧೫ ಜನ ಬಂದು ಒತ್ತಾಯ ಮಾಡಿದರು ಎಂದು ರಾತ್ರಿ ಹೊತ್ತು ವಿತರಿಕೆ ದೋಣಿಯನ್ನು ನಡೆಸಬೇಕಾಗಿತ್ತು.

ಒಬ್ಬ ಮಾನ್ಯ ಸದಸ್ಯರು.—ಅವನೇ ತೀರಿಕೊಂಡ ಮೇಲೆ ಯಾರ ಮೇಲೆ ಕ್ರಮ ತೆಗೆದು ಕೊಳ್ಳುವುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಬಹುಶಃ ಆ ರಾತ್ರಿ ಬೇರೆ ಯಾವುದೇ ವಾರ್ಗವಿಲ್ಲದೆ ಅವನ ಮನೆಗೆ ಹೋಗಿ ಜನ ತೀಕಿಕೊಂಡಿದ್ದಾರೆ. ಅವರ ಮಾತಿಗೆ ತಲೆಬಾಗಿ ಆತ ಅವರ ಸೇವೆ ಮಾಡಿ ಕೊನೆಗೆ ತನ್ನ ಪ್ರಾಣವನ್ನೇ ಕಳೆದುಕೊಂಡಿರುತ್ತಾನೆ. ಆದ್ದರಿಂದ ಇದರ ಬಗ್ಗೆ ಇಷ್ಟು ದೀರ್ಘವಾಗಿ ಚರ್ಚೆ ಮಾಡುವುದು ಸರಿಯಲ್ಲ. ಅವರೆಲ್ಲರಿಗೂ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ. ಆದರೆ ಇನ್ನುಮುಂದೆ ಇಂಥ ಘಟನೆಯಾಗದಂತೆ ಸರ್ಕಾರ ಎಲ್ಲ ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳುತ್ತದೆಂದು ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸಚಿವರು ಸಂತಾಪ ವ್ಯಕ್ತಪಡಿಸಿದ್ದಲ್ಲದೆ ಅವರು ಅಲ್ಲಿಗೆ ವಿಸಿಟ್ ಮಾಡಿದ ಬಗ್ಗೆ ಹೇಳಿದ್ದಾರೆ, ಬಹಳ ಒಳ್ಳೆಯ ಕೆಲಸ. ಆದರೆ ಈಗ ಸಮಸ್ಯೆ ಏನೆಂದರೆ, ಆನ್‌ಆಥರೈಸ್ಡ್ ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಹೇಳಿದ್ದಾರೆ. ಸಂತೋಷ. ಈಗ ಮಾನ್ಯ ಮುಖ್ಯ ಮಂತ್ರಿಗಳ ರಿಲೀಫ್ ಫಂಡಿನಿಂದ ಏನು ಹಣವನ್ನು ಕೊಟ್ಟಿರುತ್ತಾರೆ ನನ್ನ ದೃಷ್ಟಿಯಲ್ಲಿ ಇದು ಸಾಲದು. ಕೊನೇ ಪಕ್ಷ ಚೀಫ್ ಮಿನಿಸ್ಟರ್ ಫಂಡಿನಿಂದ ಇನೂ ಹೆಚ್ಚಿನ ಸಹಾಯ ಮಾಡಲು ಸಾಧ್ಯವಿತ್ತು. ಅದನ್ನು ಪೂರೈಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ, ಇಂಥ ಸಂದರ್ಭದಲ್ಲಿ ನಿರ್ದಿಷ್ಟವಾಗಿ ನಿಯಮಾವಳಿಗಳು ಸರ್ಕಾರದಲ್ಲಿ ನಿರೂಪಣೆಯಾಗಿಲ್ಲ. ಇದು ಖಾಸಗಿಯಾಗಿ ಆಗಿರತಕ್ಕಂಥದ್ದು. ಇದು ಸರ್ಕಾರದ ಚೌಕಟ್ಟಿನಲ್ಲಿಯೇ ಆಗಲಿ, ಯಾವುದೇ ಇಲಾಖೆಯ ಚೌಕಟ್ಟಿನಲ್ಲಿಯೇ ಆಗಲಿ ಆಗಿರತಕ್ಕಂಥದ್ದಲ್ಲ. ನಾನು ಅಲ್ಲಿಗೆ ಹೋಗಿ ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಮೇಲೆ, ಅವರು ಅಪಾರ ಕೃಪೆಯನ್ನಿಟ್ಟು ಮೂರು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದು ಖಾಸಗಿ ದುರಂತವೆಂದು ಮಾನ್ಯ ಸಚಿವರು ಹೇಳಿದರು, ಸರ್ಕಾರದ ಪರವಾಗಿ ದುರಂತ ನಡೆದರೆ ಎಷ್ಟು ಹಣವನ್ನು ಕೊಡುತ್ತೀರಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಕೆ.ಎಸ್.ಆರ್.ಟಿ.ಸಿ.ಯಲ್ಲಿ ದುರಂತ ನಡೆದರೆ ಸರ್ಕಾರದವರು ಇಷ್ಟು ಕೊಡಬೇಕೆಂಬ ನಿಯಮಾವಳಿಗಳು ಇದೆ. ಅದಕ್ಕೆ ಆಮೇಲೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ನೀವು ಹೇಳಿದ ಪ್ರಕಾರ ಸರ್ಕಾರದ ಪರವಾಗಿ ಸಾಯುತ್ತಿದ್ದರೆ ಅಂದರೆ ಸರ್ಕಾರದ ಸಾವಿಗೆ ಎಷ್ಟು ಹಣವನ್ನು ಕೊಡುತ್ತೀರಿ, ಖಾಸಗಿ ಸಾವಿಗೆ ಎಷ್ಟು ಹಣವನ್ನು ಕೊಡುತ್ತೀರಿ. ಇದು ಬಹಳ ಗಂಭೀರವಾದ ವಿಚಾರ.